# ಸ್ವಾಮಿ ಶಾರದೇಶಾನಂದ (೧೮೯೪-೧೯೮೮)


ಮೂಲ ಬಂಗಾಳಿ: **ಸ್ವಾಮಿ ಚೇತನಾನಂದ** ಅನುವಾದ: **ಕುಮಾರಿ ಪಿ. ಉಷಾ**

ಶ್ರೀಮಾತೆಯವರ ಶಿಷ್ಯರಾಗಿದ್ದ ಸ್ವಾಮಿ ಶಾರದೇಶಾನಂದಜಿ ಮಹಾರಾಜ್ ಅವರ ಸುಂದರವಾದ ನೆನಪಿನ ಚಿತ್ರ ಇಲ್ಲಿದೆ. ಆಧ್ಯಾತ್ಮಿಕ ಪರಂಪರೆಯಲ್ಲಿ ಹರಿದುಬಂದ ಅನೇಕ ಸತ್ವಪೂರ್ಣ ಅಂಶಗಳ ಇಣುಕುನೋಟ ಇಲ್ಲಿ ನಮಗೆ ಲಭಿಸುತ್ತದೆ. ಮಹಾಪುರುಷರ ಜೀವನದ ಸಣ್ಣ ಸಣ್ಣ ಘಟನೆಗಳೂ ಅವರ ಬದುಕಿನ ಶ್ರೇಷ್ಠತೆಯನ್ನು ಬಿಂಬಿಸುತ್ತವೆ ಎಂಬುದನ್ನು ನಾವು ಇಲ್ಲಿ ಕಾಣಬಹುದಾಗಿದೆ. (ಮೂಲ: 'ಪ್ರಾಚೀನ ಸಾಧುದೇರ್ ಕಥಾ' ಗ್ರಂಥ, ಅದ್ವೈತ ಆಶ್ರಮ, ಕೊಲ್ಕತ್ತಾ ಇದರ ಪ್ರಕಟಣೆ.)

**ಸ್ವಾ**ಮಿ ಶಾರದೇಶಾನಂದಜಿಯವರ ಪರಿಚಯ ನನಗಾದದ್ದು 'ಶ್ರೀಶ್ರೀಚೈತನ್ಯದೇವ' ಎಂಬ ಅವರ ಗ್ರಂಥದ ಮೂಲಕ. ರಾತ್ರಿ ಭೋಜನಾನಂತರ ಸಾಧು-ಬ್ರಹ್ಮಚಾರಿಗಳೆಲ್ಲ ಒಟ್ಟು ಸೇರಿದಾಗ ನವೀನ ಬ್ರಹ್ಮಚಾರಿಯೊಬ್ಬ ಹೊಸದಾಗಿ ಪ್ರಕಟಗೊಂಡಿರುವ ಪುಸ್ತಕವನ್ನು ೧೫-೨೦ ನಿಮಿಷಗಳ ಕಾಲ ಓದುವುದು ಅದ್ವೈತಾಶ್ರಮದ ಸಂಪ್ರದಾಯವಾಗಿತ್ತು. ೧೯೫೯-೬೦ರಲ್ಲಿ ಶಾರದೇಶಾನಂದಜಿಯವರು ಬರೆದ ಚೈತನ್ಯದೇವರ ಜೀವನವು ನನ್ನ ಮೇಲೆ ಗಾಢವಾದ ಪ್ರಭಾವವನ್ನು ಬೀರಿದ್ದು, ಚೈತನ್ಯರು ರಘುನಾಥರಿಗೆ ನೀಡಿದ್ದ ಉಪದೇಶವನ್ನು ನಾನು ಬಾಯಿಪಾಠ ಮಾಡಿದ್ದೆ:

ಅನ್ಯ ವಾರ್ತೆಗಳ ಕೇಳಲು ಬೇಡ,  
ಅನ್ಯವಾರ್ತೆಗಳ ನುಡಿಯಲು ಬೇಡ ।  
ರುಚಿಗಾಗಿ ಸವಿಯಲು ಬೇಡ,  
ಚೆಲುವ ವಸ್ತುಗಳ ಧರಿಸಲು ಬೇಡ ।  
ಮಾನ-ಸಮ್ಮಾನಗಳ ನೀನಿಚ್ಛಿಸಬೇಡ,  
ಕೃಷ್ಣ ನಾಮವ ನೀ ಮರೆಯಲು ಬೇಡ ।  
ಮನೆ-ಬೃಂದಾವನದಿ ನೀ ರಾಧಾಕೃಷ್ಣರ  
ಸೇವೆಯನು ಗೈಯದಿರಬೇಡ ॥

ನಾನು ೧೯೫೯ರಲ್ಲಿ ಬೃಂದಾವನಕ್ಕೆ ಹೋದಾಗ ಸ್ವಾಮಿ ಶಾರದೇಶಾನಂದರು ಅಲ್ಲಿರಲಿಲ್ಲ. ನಾನವರನ್ನು ಭೇಟಿಯಾದುದು ಸೆಪ್ಟೆಂಬರ್ ೧೯೬೬ರಲ್ಲಿ ಹಾಲಿವುಡ್‌ನಿಂದ ಬೃಂದಾವನಕ್ಕೆ ಹೋದಾಗ. ಅವರ ತ್ಯಾಗ-ವೈರಾಗ್ಯ, ಸಾಧನೆ-ಭಜನೆ ಹಾಗೂ ವಿದ್ವತ್ತನ್ನು ಕಂಡು ಮುಗ್ಧನಾದೆ. ಶ್ರೀಮಾತೆಯವರ ಶಿಷ್ಯರಾಗಿದ್ದು, ತಾವೇ ಬೆಳೆಸಿದ್ದ ಅನೇಕ ಸಾಧು-ಬ್ರಹ್ಮಚಾರಿಗಳಲ್ಲಿ ಪ್ರೇರಣೆ, ಆನಂದಗಳನ್ನು ಜಾಗೃತಗೊಳಿಸುತ್ತಿದ್ದರು. ನಿಜವಾಗಿಯೂ ಅವರು ಗುಣವಂತ ಹಾಗೂ ಆದರ್ಶ ಸಾಧುಗಳಾಗಿದ್ದರು. ನಾನು ಯಾವುದೇ ಸಾಧುಗಳ ಕೋಣೆಗೆ ಹೋದಾಗ ಅವರ ಪುಸ್ತಕ ಹಾಗೂ ಫೋಟೋಗಳ ಸಂಗ್ರಹವನ್ನು ನೋಡುವ ಅಭ್ಯಾಸ ನನಗಿತ್ತು. ಮಹಾರಾಜರ ಕೋಣೆಯಲ್ಲಿದ್ದುದೆಂದರೆ, ಅವರ ಮಂಚದ ಮೇಲೆ ೨-೩ ಮಡಿಕೆಯಲ್ಲಿ ಮಡಚಿಟ್ಟ ಕಂಬಳಿಯೊಂದರ ಮೇಲೆ ಒಂದು ಕಾವಿ ವಸ್ತ್ರ, ಒಂದು ಚಿಕ್ಕ ತಲೆದಿಂಬು, ತಲೆಯ ಭಾಗದಲ್ಲಿ ಚಿಕ್ಕದೊಂದು ಟೇಬಲ್ ಫ್ಯಾನ್, ಮಂಚದ ಪಕ್ಕದಲ್ಲಿ ಕೆಲವು ಪುಸ್ತಕಗಳು, ಒಂದು ಛತ್ರಿ, ಒಂದು ಕೋಲು, ಒಂದು ಜೋಡು ಚಪ್ಪಲಿ, ೨-೩ ಚಿಕ್ಕ ವಸ್ತುಗಳು ಹಾಗೂ ಉತ್ತರೀಯ, ಟೇಬಲ್ ಮೇಲೆ ಶ್ರೀರಾಮಕೃಷ್ಣ ಹಾಗೂ ಶ್ರೀಮಾತೆಯವರ ಭಾವಚಿತ್ರ, ಒಂದು ನೀರಿನ ಹೂಜಿ ಹಾಗೂ ಊಟದ ಸಮಯ ಡೈನಿಂಗ್ ಹಾಲ್‌ಗೆ ಅವರು ತೆಗೆದುಕೊಂಡು ಹೋಗುತ್ತಿದ್ದ ದೊಡ್ಡ ಬಟ್ಟಲು. ನಾವು ಒಟ್ಟಿಗೆ ಕುಳಿತು ಊಟ ಮಾಡುತ್ತಿದ್ದವು. ಅವರು ಒಂದು ಮೂಲೆಯಲ್ಲಿ ನಿರ್ದಿಷ್ಟ ಸ್ಥಳದಲ್ಲಿ ಕುಳಿತುಕೊಳ್ಳುತ್ತಿದ್ದರು. ಹಲ್ಲುಗಳೆಲ್ಲ ಉದುರಿಹೋದದ್ದರಿಂದ ಅನ್ನ, ಬೇಳೆ, ಸಾರು, ಪಲ್ಯಗಳನ್ನು ಸ್ವಲ್ಪ ಸ್ವಲ್ಪವಾಗಿ ನುರಿದು ತಿನ್ನುತ್ತಿದ್ದರು. ಊಟವಾದ ಬಳಿಕ ತಮ್ಮ ಬಟ್ಟಲನ್ನು ತಾವೇ ತೊಳೆದು ತಮ್ಮ ಕೋಣೆಗೆ ತೆಗೆದುಕೊಂಡು ಹೋಗುತ್ತಿದ್ದರು. ಅವರು ಮಂದಿರಕ್ಕೆ ಹೋಗಿದ್ದ ವೇಳೆ ಅವರ ಕೋಣೆಯ ಫೋಟೊ ತೆಗೆದಿದ್ದೆ.



ಮಹಾರಾಜರ 'ಸಂಪತ್ತು' ಮಹಾತ್ಮಾ ಗಾಂಧೀಜಿಯ ಮರಣಾನಂತರ ಅವರ ಕೋಣೆಯಲ್ಲಿದ್ದ ವಸ್ತುಗಳನ್ನು ನೆನಪಿಗೆ ತರುತ್ತವೆ. ಗಾಂಧೀಜಿಯವರ ಕೋಣೆಯಲ್ಲಿದ್ದುದೆಂದರೆ — ಒಂದು ಜೊತೆ ಚರ್ಮದ ಮೆಟ್ಟುಗಳು, ಒಂದು ಪಾಕೆಟ್ ಗಡಿಯಾರ, ಪತ್ರಗಳನ್ನು ಒಡೆಯುವ ಒಂದು ಚೂರಿ, ಒಂದು ಪೀಕದಾನಿ, ಒಂದು ಕನ್ನಡಕ, ಒಂದು ಭಗವದ್ಗೀತೆಯ ಪ್ರತಿ, ಒಂದು ಕಪ್ಪು ಮತ್ತೊಂದು ಬಿಳಿಯ ಬಟ್ಟಲು, ಒಂದು ಚಮಚ ಹಾಗೂ ಬಾಯಿ, ಕಿವಿ, ಕಣ್ಣುಗಳನ್ನು ಮುಚ್ಚಿಕೊಂಡಿರುವ ಮೂರು ಕೋತಿಗಳ ವಿಗ್ರಹ. 'ವೈರಾಗ್ಯಮೇವ ಅಭಯಮ್'- ವೈರಾಗ್ಯವೊಂದೇ ವ್ಯಕ್ತಿಯನ್ನು ಭಯಹೀನನನ್ನಾಗಿ ಮಾಡುವುದರಿಂದ, ವೈರಾಗ್ಯವಂತನನ್ನು ಎಲ್ಲರೂ ಗೌರವಿಸುತ್ತಾರೆ.

ರಾತ್ರಿ ಊಟದ ಬಳಿಕ ಅವರು ಬಂದು ಲೈಬ್ರರಿಯಲ್ಲಿ ನಡೆಯುವ ಕ್ಲಾಸಿನಲ್ಲಿ ಅವರು ಕುಳಿತುಕೊಳ್ಳುತ್ತಿದ್ದರು. ಒಬ್ಬ ಸಾಧು

ಗಳು ಒಮ್ಮೆ ''ಇವತ್ತು ಕ್ಲಾಸ್ ಉಂಟೆ?'' ಎಂದು ಪ್ರಶ್ನಿಸಿದಾಗ ಅವರು ಉತ್ತರವಾಗಿ, ''ಯಾಕಪ್ಪ, ಊಟಕ್ಕೆ ಮುಂಚೆ ನೀನು 'ಇವತ್ತು ಊಟ ಉಂಟೆ' ಎಂದು ಕೇಳುವುದಿಲ್ಲವಲ್ಲ!'' ಎಂದಿದ್ದರು. ಅಂದು ಕ್ಲಾಸ್ ನಡೆಯಿತು. ಬಳಿಕ ಹೇಳಿದರು, ''ಕ್ಲಾಸಿನ ಬದಲಾಗಿ, ಆ ದೇಶದ ಬಗ್ಗೆ ಚೇತನಾನಂದನಿಂದ ತಿಳಿದುಕೊಂಡಿದ್ದರೆ ಚೆನ್ನಾಗಿರುತ್ತಿತ್ತು.'' ನಂತರ ಅವರು ''ಆ ದೇಶದಲ್ಲಿ ನೀವೇನು ಮಾಡುತ್ತೀರಿ?'' ಎಂದು ಪ್ರಶ್ನಿಸಿದಾಗ ನಾನು ಅವರಿಗೆ ಹಾಲಿವುಡ್ ಕೇಂದ್ರದ ದಿನಚರಿಯನ್ನು ವಿವರಿಸಿದೆ: ''ಬೆಳಗ್ಗೆ, ಮಧ್ಯಾಹ್ನ ಹಾಗೂ ಸಾಯಂಕಾಲ ಧ್ಯಾನ ಮಾಡುತ್ತೇವೆ. ಸಂನ್ಯಾಸಿನಿಯರು ಪೂಜೆ ಮಾಡುತ್ತಾರೆ. ಅಮೆರಿಕದಲ್ಲಿ ನಮಗೆ ಅಡಿಗೆಯವರಾಗಲಿ, ಕೆಲಸದವರಾಗಲಿ ಇಲ್ಲ — ಸಾಮಾನು ಕೊಂಡು ತರುವುದು, ಅಡಿಗೆ ಮಾಡುವುದು, ಪಾತ್ರೆ ತೊಳೆಯುವುದು, ಬಟ್ಟೆ ಒಗೆಯುವುದು — ಎಲ್ಲವನ್ನೂ ನಾವೇ ಮಾಡಿಕೊಳ್ಳಬೇಕು. ವಾರಕ್ಕೆ ಎರಡು ದಿನ ತರಗತಿಯೂ, ಒಂದು ದಿನ ಪ್ರವಚನವೂ ಇರುತ್ತದೆ.'' ಎಲ್ಲವನ್ನೂ ಕೇಳಿಸಿಕೊಂಡ ಬಳಿಕ ಅವರು ಹೇಳಿದರು: ''ನೋಡು, ನೀವು ಅವರಿಗೆ ವೇದಾಂತವನ್ನು ಕಲಿಸುತ್ತೀರಿ. ಇದು ಒಳ್ಳೆಯದು. ಆದರ್ಶ ಗೃಹಸ್ಥರಾಗುವುದು ಹೇಗೆಂಬುದನ್ನೂ ಅವರಿಗೆ ಹೇಳಬೇಕು. ಅವರಲ್ಲಿ ವಿಚ್ಛೇದನ ಹೆಚ್ಚಾಗಿದ್ದು, ಕುಟುಂಬ ಜೀವನ ಒಡೆದು ಹೋಗುತ್ತಿವೆ. ಮಕ್ಕಳ ಮೇಲೆ ಪ್ರೀತಿ ಹೆಚ್ಚಿದಾಗ ವಿಚ್ಛೇದನಗಳು ಕಡಿಮೆಯಾಗುತ್ತವೆ. ಸಂಸಾರದಲ್ಲಿ ಶಾಂತಿ ನೆಲೆಸುತ್ತದೆ.''

ಶ್ರೀಮಾತೆಯವರ ವೃದ್ಧ ಶಿಷ್ಯರೊಬ್ಬರು ಅಮೆರಿಕನ್ನರ ಹಿತವನ್ನು ಬಯಸುತ್ತಿರುವುದನ್ನು ನಾನು ಆಶ್ಚರ್ಯದಿಂದ ಕೇಳತೊಡಗಿದೆ.

ಮಠ-ಮಿಷನ್ನಿನ ಕೆಲಸ, ಕಾರ್ಯಗಳ ವಿಚಾರವಾಗಿ ಸ್ವಾಮಿ ಶಾರದೇಶಾನಂದಜಿಯವರೊಡನೆ ದೀರ್ಘ ಚರ್ಚೆ ನಡೆಯಿತು. ಆಗ ಅವರು ಕೆಲಸದಿಂದ ನಿವೃತ್ತರಾಗಿದ್ದರೂ, ಸಂಘದ ಕಲ್ಯಾಣಕ್ಕಾಗಿ ಸದಾ ಚಿಂತಿಸುತ್ತಿದ್ದರು. ಹಡಗಿಗೆ ದಿಕ್ಕುತೋರುವ compass ನಂತೆ ಅವರು ಸಾಧುಗಳಿಗೆ ತಮ್ಮ ಗುರಿಯನ್ನು ತೋರುತ್ತಿದ್ದರು. ನನ್ನ ಡೈರಿಯಲ್ಲಿ ಅನೇಕ ವಿಷಯಗಳನ್ನು ಬರೆದಿದ್ದೆ. ಮಹಾರಾಜರ ಒಂದು ಮಾತು ತುಂಬ ನೆನಪಿಗೆ ಬರುತ್ತದೆ. ''ಮಹಾಪುರುಷ ಮಹಾರಾಜರು ಸಾಧುವೊಬ್ಬರಿಗೆ ಕೆಲಸ ಮಾಡಲು ಹೇಳಿದಾಗ, ಅವರು 'ಭಗವದ್ ಲಾಭವೇ ಜೀವನದ ಉದ್ದೇಶ, ಕೆಲಸವಲ್ಲ' ಎಂದು ಉತ್ತರವಿತ್ತರು. ಆಗ ಮಹಾಪುರುಷರು ಕೋಪಗೊಂಡು 'ಠಾಕೂರರ ಕಾರ್ಯವನ್ನು ಮಾಡುತ್ತ ಹೋದರೆ ಚಿತ್ತಶುದ್ಧಿಯಾಗಿ ತನ್ಮೂಲಕ ಮುಕ್ತಿಯಾಗುತ್ತದೆ ಎಂದು ಸ್ವಾಮೀಜಿ ಹೇಳಿದ್ದಾರೆ. ನೀನು ಸ್ವಾಮೀಜಿಯವರನ್ನು ವಂಚಕನೆಂದು ಹೇಳುತ್ತೀಯಾ?' ಎಂದು ಗದರಿದರು.''

ಅಂದು ರಾತ್ರಿ ಮಹಾರಾಜರು ನನಗೆ ಹೇಳಿದರು, ''ಭಗವಂತನನ್ನು ಪಡೆಯಬೇಕೆಂದಿದ್ದರೆ ಆತನ ಮೇಲೆ ವಿಶ್ವಾಸವಿಡು. ನಿನ್ನನ್ನು ಆತನ ಇಚ್ಛೆಗೆ ಸಮರ್ಪಿಸಿಕೊ... ಸ್ವಾರ್ಥ ಒಳ್ಳೆಯದಲ್ಲ. ಅದೇ ಬಂಧನ. ಆದರೆ ಆತ್ಮರಕ್ಷಣೆ ಅಗತ್ಯ. ನಿತ್ಯ ನಿಯಮಿತ ಸಾಧನೆ-ಭಜನೆ ಆವಶ್ಯಕ. ಮನಸ್ಸನ್ನು ಏಕಾಗ್ರಗೊಳಿಸಲು ಯೋಗ ಮಾಡು.''

ಹಿಂದಿನ ದಿನ ಅವರು ಸಾಧು ಜೀವನದ ಮೂರು ಆವಶ್ಯಕತೆಗಳ ಬಗ್ಗೆ ಹೇಳಿದ್ದರು. ''ಒಂದು-ಚಾರಿತ್ರ್ಯ. ಚಾರಿತ್ರ್ಯದ ಗಳಿಕೆಯನ್ನು ಯಮ: ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ ಹಾಗೂ ಈಶ್ವರ ಪ್ರಣಿಧಾನ — ಇವುಗಳ ಮೂಲಕ ಮಾಡಿಕೊಳ್ಳಬೇಕು. ಎರಡು-ವಿಶ್ವಾಸ ಹಾಗೂ ಭಕ್ತಿ. ಭಗವಂತನಲ್ಲಿ ವಿಶ್ವಾಸ ಹಾಗೂ ಭಕ್ತಿ - ಇವು ಸಾಧುಜೀವನಕ್ಕೆ ಅತ್ಯಗತ್ಯ. ಬರಿಯ ವಿಶ್ವಾಸ- ಭಕ್ತಿಗಳಿದ್ದರೆ ಸಾಲದು. ನೀನು ಮಾಡುವ ಕಾರ್ಯಗಳಲ್ಲಿ ಈ ಗುಣಗಳು ಪ್ರಕಟಗೊಳ್ಳಬೇಕು. ಇತರರ ಸೇವೆಯಲ್ಲಿ ಸಂಪೂರ್ಣವಾಗಿ ನಿರತನಾಗು. ಇತರರ ಮೇಲೆ ನಿನಗಿರುವ ಪ್ರೀತಿ ಹಾಗೂ ಸೇವಾ ಭಾವವು ಸ್ವಾರ್ಥದ ರೂಪದ ಬಂಧನದಿಂದ ನಿನ್ನನ್ನು ಬಿಡಿಸುತ್ತದೆ. ಸಾಧುವಿನ ಜೀವನವೇ ಪ್ರಚಾರ.'' ಪ್ರತಿದಿನವೂ ಭಾಗವತವನ್ನು ಓದಿದರೆ ಭಗವಂತನಲ್ಲಿ ಭಕ್ತಿಯುಂಟಾಗುತ್ತದೆಂದು ಮಹಾ ರಾಜರು ಹೇಳುತ್ತಿದ್ದರು.

ಇನ್ನೂ ಎರಡು ವಿಷಯಗಳನ್ನು ಅವರು ನನಗೆ ಹೇಳಿದ್ದರು. ಒಂದು ಠಾಕೂರರ ಭಾವಪ್ರಚಾರ. ಈ ಯುಗದಲ್ಲಿ ಠಾಕೂರರ ಸಾರ್ವತ್ರಿಕ ಉದಾರ ಭಾವವು ಪ್ರಚಾರವಾದಷ್ಟೂ ಮಾನವನ ಕಲ್ಯಾಣವಾಗುತ್ತದೆ. ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಅಸೂಯೆ, ದ್ವೇಷ ಹಾಗೂ ಹಿಂಸಾಚಾರಗಳು ಕಡಿಮೆಯಾಗುತ್ತವೆ. ಎರಡನೆಯದು, ಗೃಹಸ್ಥ ಧರ್ಮದ ಉದ್ಧಾರ. ಗೃಹಸ್ಥ ಜೀವನವೇ ಸಮಾಜದ ಅಡಿಗಲ್ಲು. ಗೃಹಸ್ಥ ಜೀವನವು ಅಸ್ಥಿರವಾದರೆ ಸಮಾಜವೂ ಅಸ್ಥಿರವಾಗುತ್ತದೆ. ಗೃಹಸ್ಥರು ಧಾರ್ಮಿಕರಾಗಿದ್ದರೆ ಮಕ್ಕಳೂ ಧಾರ್ಮಿಕರಾಗುವರು. ''ಸಾಧುಗಳೊಬ್ಬರು ಗೃಹಸ್ಥರನ್ನು ಸ್ವಲ್ಪ ಕೀಳಾಗಿ ನೋಡುತ್ತಿದ್ದರೆ ಮತ್ತೊಬ್ಬ ಸಾಧುಗಳು ಅವರಿಗೆ ಹೇಳಿದ್ದರು, ಅರೆ, ಗೃಹಸ್ಥರ ಮನೆಯಲ್ಲೇ ಅಲ್ಲವೆ ಸಾಧುಗಳು ಜನ್ಮ ತಳೆಯುವುದು? ಸಂನ್ಯಾಸಿಯ ಉದರದಿಂದ ಸಂನ್ಯಾಸಿಯು ಹುಟ್ಟುವುದಿಲ್ಲ!''

ಪ್ರತಿದಿನ ಬೆಳಗ್ಗೆ ಉಪಾಹಾರದ ನಂತರ ಅವರು ಠಾಕೂರರ ಮಂದಿರಕ್ಕೆ ಹೋಗುತ್ತಿದ್ದರು. ಪ್ರಾರ್ಥನಾ ಮಂದಿರದಲ್ಲಿ ಕುಳಿತು ಅವರು ಜಪ-ಧ್ಯಾನ ಹಾಗೂ ಪ್ರಾರ್ಥನೆಗಳನ್ನು ಮಾಡುತ್ತಿದ್ದರು. ಅವರೊಡನೆ ಒಂದು ಛತ್ರಿ, ಒಂದು ಸ್ತವಾದಿ ಪುಸ್ತಕಗಳ ಬಟ್ಟೆಯ ಚೀಲ ಇವು ಇರುತ್ತಿದ್ದವು. ವಿಶ್ವದ ಸುಮಾರು ಎಲ್ಲ ಧರ್ಮಗಳ ಪ್ರಾರ್ಥನೆಗಳನ್ನು ಅವರು ಸಂಗ್ರಹಿಸಿದ್ದರು. ಈ ಪ್ರಾರ್ಥನೆಗಳನ್ನು ಅವರು ಸರ್ವಧರ್ಮ ಸ್ವರೂಪರಾದ ಶ್ರೀರಾಮಕೃಷ್ಣರೆದುರು ಪಠಿಸುತ್ತಿದ್ದರು. ೮೬ರ ಹರೆಯದ ವೃದ್ಧ ಸಾಧುಗಳಾಗಿದ್ದ ಇವರು ಮೂರು-ನಾಲ್ಕು ಗಂಟೆಗಳ ಕಾಲ ಠಾಕೂರರೆದುರು ಕುಳಿತಿರುತ್ತಿದ್ದರು. ಮಂದಿರದ ಹೊರಬಂದು sun-glass ಧರಿಸಿ ತಮ್ಮ ಕೋಣೆಗೆ ಹೋಗುತ್ತಿದ್ದರು. ಕಾಮನಾರಹಿತ, ನಿರಾಡಂಬರ, ವೈರಾಗ್ಯಪೂರ್ಣರಾಗಿದ್ದ ಮಹಾರಾಜರನ್ನು ನೋಡಿದರೆ ಹೃದಯ ತುಂಬುತ್ತಿತ್ತು. ಈ ರೀತಿ ಅವರು ತಮ್ಮ ಕೋಣೆಯತ್ತ ನಡೆಯುತ್ತಿದ್ದಾಗ ಅವರೊಂದಿಗೆ ನಿಂತು ತೆಗೆಸಿಕೊಂಡಿದ್ದ ಫೋಟೋ ಸೇಂಟ್ ಲೂಯಿಸ್ ಕೇಂದ್ರದ ವೆಬ್‌ಸೈಟಿನಲ್ಲಿದೆ.

ಒಂದು ದಿನ ನಾನು ಅವರನ್ನು ಕೇಳಿದೆ: ''ನಮ್ಮ ಸಂಘದ ಭವಿಷ್ಯದ ಬಗ್ಗೆ ನೀವೇನು ನೋಡುತ್ತೀರಿ?'' ಅವರು, ''ನೋಡು, ನನಗೆ ಭಗವಂತನಲ್ಲಿ ವಿಶ್ವಾಸ. ಠಾಕೂರರ ಇಚ್ಛೆಯಂತಾಗುತ್ತದೆ'' ಎಂಬ ದೃಢ ಉತ್ತರವನ್ನು ನೀಡಿದರು.

### ೧೮.೯.೧೯೮೬, ವೃಂದಾವನ

ನಾನು ಮಹಾರಾಜರೊಂದಿಗೆ ಮುಕ್ತವಾಗಿ ಮಾತಾಡುತ್ತಿದ್ದೆ. ಅವರು ಮೇಲಂಗಿಯನ್ನು ತೊಡದೆ ಹಾಸಿಗೆಯಲ್ಲಿ ಮಲಗಿದ್ದನ್ನು ನೋಡಿ ನಾನು, ''ಮಹಾರಾಜ್, ನಿಮ್ಮ ವಕ್ಷವನ್ನು ನೋಡಿದರೆ ನೀವು ೨೦ ವರ್ಷಗಳ ಯುವಕನಂತೆ ಕಾಣುತ್ತೀರಿ,'' ಎಂದೆ. ಅವರು ನಸುನಕ್ಕರು. ಸತತ ಜಪ ಮಾಡುತ್ತ ಅವರ ಕೈಬೆರಳುಗಳು ಸೊಟ್ಟಗಾಗಿದ್ದವು. ಒಂದೇ ಆಸನದಲ್ಲಿ ದೀರ್ಘಸಮಯ ಕುಳಿತಿರುತ್ತಿದ್ದುದರಿಂದ ಮೊಣಕಾಲು ನೆಟ್ಟಗಾಗುತ್ತಿರಲಿಲ್ಲ. ಮಹಾರಾಜರು ಕೈಬೆರಳುಗಳನ್ನು ಮತ್ತೆ ಮತ್ತೆ ಎಳೆದು ನೆಟ್ಟಗೆ ಮಾಡಲು ಪ್ರಯತ್ನಿಸುತ್ತಿದ್ದರು. 'ತಪಸ್ಸು' ಎಂದರೆ ಏನೆಂಬುದನ್ನು ಮಹಾರಾಜರು ತೋರಿಸಿಕೊಟ್ಟಿದ್ದರು. ಏಕಾಸನದಲ್ಲಿ ಕುಳಿತು ದೀರ್ಘಕಾಲ ಜಪ ಧ್ಯಾನ ಮಾಡಿದ್ದರಿಂದ ಅವರ ಶರೀರದ ಅವಸ್ಥೆ ಹೀಗಾಗಿರುವುದೆಂದು ಅವರು ಅನೂಪನಿಗೆ ಹೇಳಿದರು.

ಇಂದು ನಾನು ಕೇಳಿದೆ, ''ಮಹಾರಾಜ್, ಶ್ರೀಮಾತೆಯವರಲ್ಲಿ ನೀವು ಯಾವ ವಿಶೇಷ ಗುಣವನ್ನು ಕಂಡಿರಿ? ನೀವು ಅವರೊಂದಿಗೆ ಜಯರಾಂಬಾಟಿಯಲ್ಲಿ ಬಹಳ ಸಮಯ ಇದ್ದಿರಲ್ಲಾ!'' ಶಾಂತರಾಗಿ ಅವರು ಉತ್ತರಿಸಿದರು, ''ನಿರಭಿಮಾನತೆ. ಶ್ರೀಮಾತೆಯವರಲ್ಲಿ ಅಭಿಮಾನ-ಅಹಂಕಾರಗಳು ಲೇಶಮಾತ್ರವೂ ಇರಲಿಲ್ಲ. ಮನುಷ್ಯನೆಂದ ಮೇಲೆ ಅಹಂಕಾರವಿರುತ್ತದೆ. ಭಗವಂತ ಅಹಂಕಾರ ರಹಿತನಾಗಿದ್ದಾನೆ. ಅಜ್ಞಾನವೇ ಅಹಂಕಾರಕ್ಕೆ ಕಾರಣ.''

**ನಾನು:** ಶ್ರೀಮಾತೆಯವರು ಮಾಡುತ್ತಿದ್ದ ಪೂಜೆಯ ಬಗ್ಗೆ ಹೇಳಿ.

**ಶಾರದೇಶಾನಂದಜಿ:** ಅವರು ಪೂಜೆಯ ಬಳಿಕ ಧ್ಯಾನ ಮಾಡುತ್ತಿದ್ದರು. ಆಗ ಅವರು ಸಮಾಧಿಯಲ್ಲಿ ಮಗ್ನರಾಗಿದ್ದುದನ್ನು ಕಂಡಿದ್ದೇನೆ.

**ನಾನು:** ದೀಕ್ಷೆಯ ಬಳಿಕ ಅವರು ಯಾವ ಬಗೆಯ ವಿಶೇಷ ಉಪದೇಶ ನೀಡುತ್ತಿದ್ದರು?

ಮಹಾರಾಜರು ಮೌನವಾಗಿದ್ದರು.

**ನಾನು:** ದೀಕ್ಷೆಯನ್ನು ನೀಡುವಾಗ ಶ್ರೀಮಾತೆಯವರು ಯಾವ ಇಷ್ಟದೇವರನ್ನು ನಿರ್ದೇಶಿಸುತ್ತಿದ್ದರು?

**ಮಹಾರಾಜ್:** ನನಗೆ ನನ್ನದು ಮಾತ್ರ ಗೊತ್ತು. ಭಗವಂತನೇ ಇಷ್ಟದೇವರೆಂದು ಹೇಳುತ್ತಿದ್ದರು.

**ನಾನು:** ಶ್ರೀಮಾತೆಯವರು ಠಾಕೂರರ ಬಗ್ಗೆ ಏನು ಹೇಳುತ್ತಾರೆ?

ಮಹಾರಾಜರು ಮೌನವನ್ನು ತಳೆದರು.

ಮಹಾರಾಜರು ಶ್ರೀಮಾತೆಯವರ ಸ್ಮೃತಿಕಥೆಯನ್ನು ವಿಸ್ತಾರವಾಗಿ ಬರೆದು ಸ್ನೇಹಿತರೊಬ್ಬರಿಗೆ ಓದಲು ಕೊಟ್ಟಿದ್ದರಂತೆ. ನಂತರ ಅವರು ತಪಸ್ಸು ಮಾಡಲೆಂದು ಹೋದರಂತೆ. ಕೆಲವು ವರ್ಷಗಳ ಬಳಿಕ ಆ ಸ್ಮೃತಿಕಥೆಯ ಪುಸ್ತಕವನ್ನು ಕೇಳಿದಾಗ ಆ ಸ್ನೇಹಿತರು, 'ಅದು ಕಳೆದುಹೋಗಿದೆಯೆಂದು ಹೇಳಿದರು,' ಎಂದರು. ಇದು ತಾಯಿಯ ಇಚ್ಛೆಯೆಂದೇ ಬಗೆದು ಅವರು ಪುನಃ ಬರೆಯಲಾರಂಭಿಸಿದರು. ನಂತರ ಇದು, 'ಶ್ರೀ ಶ್ರೀ ಮಾತೆಯವರ ಸ್ಮೃತಿ ಕಥೆ' ಎಂಬ ಶೀರ್ಷಿಕೆಯಲ್ಲಿ ಪ್ರಕಟವಾಯಿತು. ನಿಜ ಹೇಳಬೇಕೆಂದರೆ, ಬಹು ಅಮೂಲ್ಯವಾದ ವಸ್ತುವೊಂದನ್ನು ನಾವು ಕಳೆದುಕೊಂಡಿದ್ದೇವೆ.

### ೧೯.೦೯.೧೯೮೬, ವೃಂದಾವನ

ರಾತ್ರಿ ಬ್ರಹ್ಮಚಾರಿ ಅನೂಪ ತನ್ನ ಡೈರಿ ತೋರಿಸಿದರು. '**ಸಾಧುಸಂಗ: ಸ್ಮೃತಿರತ್ನಮಾಲಾ**' ಎಂಬ ಶೀರ್ಷಿಕೆಯ ಲೇಖನವು 'ಉದ್ಬೋಧನ' ಪತ್ರಿಕೆಯಲ್ಲಿ ಸ್ವಾಮಿ ಶುಕ್ಲಾತ್ಮಾನಂದರ (ಅನೂಪರ ಸಂನ್ಯಾಸದ ಹೆಸರು) ಹೆಸರಿನಲ್ಲಿ ಪ್ರಕಟವಾಯಿತು. ಅದರಲ್ಲಿ ಮಹಾರಾಜರ ಅರ್ಥಪೂರ್ಣ ಘಟನೆಗಳು ಹಾಗೂ ಉಪದೇಶಗಳಿವೆ. ಅನೂಪರ ಡೈರಿಯಿಂದ ನಾನು ಕೆಲವು ಘಟನೆ ಹಾಗೂ ಉಪದೇಶಗಳನ್ನು ನನ್ನ ಡೈರಿಯಲ್ಲಿ ಬರೆದುಕೊಂಡಿದ್ದು, ಅವುಗಳಲ್ಲಿ ಕೆಲವನ್ನು ಇಲ್ಲಿ ಬರೆಯುತ್ತಿದ್ದೇನೆ:

೧೯೪೭ರಲ್ಲಿ ದೇಶದ ವಿಭಜನೆಯ ನಂತರ ಪೂರ್ವ ಬಂಗಾಳದ ನೋವಾಖಾಲಿಯಲ್ಲಿ ಹಿಂದೂ-ಮುಸಲ್ಮಾನರ ದಂಗೆಯಾದಾಗ ಶಾರದೇಶಾನಂದಜಿ ಪರಿಹಾರದ ಕೆಲಸಕ್ಕಾಗಿ ಅಲ್ಲಿಗೆ ಹೋದರು. ಮಹಾತ್ಮಾ ಗಾಂಧಿಯವರೂ ಹೋಗಿದ್ದರು. ಗಾಂಧೀಜಿ ಮಹಾರಾಜರಿಂದ ಬಂಗಾಳಿ ಕಥಾಮೃತ (ವಚನವೇದ) ವನ್ನು ಕೇಳಲಿಚ್ಛಿಸಿದರು. ಮೊದಲ ದಿನ ಅವರು ಗಾಂಧೀಜಿಗೆ 'ಕಥಾಮೃತ'ವನ್ನು ಓದಿ ಹೇಳಿದರು. ಎರಡನೆ ದಿನ ಅವರು ಹೋದಾಗ ಗಾಂಧೀಜಿಯವರ ಸೆಕ್ರೆಟರಿಗಳಾಗಿದ್ದ ನಿರ್ಮಲ್ ಬಸು, ಅಂದು ಅವರು ಬಿಡುವಿಲ್ಲದ ಕೆಲಸದಲ್ಲಿ ನಿರತರಾಗಿರುವರೆಂದು ಹೇಳಿದರು. ಮಹಾರಾಜರು ಹಿಂದಿರುಗಿದರು. ಮಾರನೆಯ ದಿನ ಮಹಾರಾಜರು ಮತ್ತೆ 'ಕಥಾಮೃತ'ವನ್ನು ಓದಲು ಹೋದಾಗ ಗಾಂಧೀಜಿ, ''ಸ್ವಾಮೀಜಿ, ನಿನ್ನೆ ನೀವು ಬರಲಿಲ್ಲವಲ್ಲ!'' ಎಂದರು. ಮಹಾರಾಜರು, ''ನಾನು ಬಂದಿದ್ದೆ. ಆದರೆ ನಿಮ್ಮ ಸೆಕ್ರೆಟರಿ ನಿಮಗೆ ಬಿಡುವಿಲ್ಲದ ಕೆಲಸವೆಂದು ಹೇಳಿದರು'' ಎಂದರು. ಕೂಡಲೆ ಗಾಂಧೀಜಿ, ''ಸ್ವಾಮೀಜಿ, ಈ ಕೆಲಸವೂ ಇತರ ಕೆಲಸಗಳಷ್ಟೇ ಅಗತ್ಯವಲ್ಲವೆ?'' ಎಂದಿದ್ದರು. ದಾರಿಯಲ್ಲಿ ನಡೆಯುವಾಗ ಗಾಂಧೀಜಿಯವರು ಸಂನ್ಯಾಸಿಗಳನ್ನು ಮುಂದಿರಿಸಿಕೊಂಡು ತಾವು ಹಿಂಬಾಲಿಸುತ್ತಿದ್ದರು. ಮಹಾರಾಜರ ಒಂದು ವಿಶೇಷತೆಯನ್ನು ಲಕ್ಷಿಸಿದ್ದೇನೆ. ಅವರು ಸಾಧುಗಳ ಅಧ್ಯಾತ್ಮ ಉನ್ನತಿಗಾಗಿ ಉಪದೇಶ ನೀಡುವಂತೆಯೇ ಗೃಹಸ್ಥರಿಗೂ ಒಳ್ಳೆಯ ಮಾತುಗಳನ್ನು ಹೇಳುತ್ತಿದ್ದರು. ಸಾಧುಗಳಿಗೆ ಈ ಕೆಳಗಿನ ನಾಲ್ಕು ವಿಷಯಗಳನ್ನು ಗಮನದಲ್ಲಿಡಬೇಕೆನ್ನುತ್ತಿದ್ದರು:

೧. ಸತ್ ಚಾರಿತ್ರ್ಯ ಪಾಲನೆ - ಇಂದ್ರಿಯ ಹಾಗೂ ಮನಸ್ಸಿನ ಸಂಯಮ. ಷಡ್ರಿಪು ದಮನ.

೨. ಜಗತ್ತಿನ ಸೃಷ್ಟಿ, ಸ್ಥಿತಿ, ಪ್ರಳಯಕರ್ತನಾದ ಸರ್ವವ್ಯಾಪಿ, ಸರ್ವಶಕ್ತನಾದ ಪರಮೇಶ್ವರನ ಅಸ್ತಿತ್ವದಲ್ಲಿ ದೃಢ ವಿಶ್ವಾಸ ಹಾಗೂ ವರ್ತಮಾನ ಯುಗದಲ್ಲಿ ಜಗತ್ಕಲ್ಯಾಣಕ್ಕಾಗಿ ಶ್ರೀರಾಮಕೃಷ್ಣರ ಆವಿರ್ಭಾವ, ಸಂಘನಿರ್ಮಾಣ, ಯುಗಧರ್ಮ ಪ್ರವರ್ತನಕ್ಕಾಗಿ ಮಾಡುವ ಕರ್ಮದಲ್ಲಿ ದೃಢವಿಶ್ವಾಸ ಸ್ಥಾಪನೆ.

೩. ನಿತ್ಯನಿಯಮಿತ ರೀತಿಯಲ್ಲಿ ಬೆಳಗ್ಗೆ ಹಾಗೂ ಸಂಜೆ ಭಗವದುಪಾಸನೆ, ಜಪ-ಧ್ಯಾನ, ಪ್ರಾರ್ಥನಾದಿ ಕರ್ಮಗಳ ನಿಷ್ಠಾಪೂರ್ವಕ ಅಭ್ಯಾಸ. ಸತ್ಸಂಗ ಹಾಗೂ ಸದ್ಗ್ರಂಥ ಪಠಣ. ಸಕಲ ಕರ್ತವ್ಯ ಕರ್ಮಗಳನ್ನು ಸೃಷ್ಟಿಕರ್ತನಾದ ಭಗವಂತನದೇ ಸೇವೆಯೆಂದು ತಿಳಿದು ಸಂಪೂರ್ಣ ಮನಸ್ಸಿನಿಂದ ಮಾಡುವುದು.

೪. ಎಲ್ಲರೊಡನೆ ಪ್ರೀತಿ-ಸ್ನೇಹದಿಂದ ವರ್ತಿಸುವುದು. ಸಾಧ್ಯವಾದಷ್ಟು ಮಟ್ಟಿಗೆ ಇತರರ ಕಲ್ಯಾಣಕ್ಕಾಗಿ ಪ್ರಯತ್ನಿಸುವುದು. ಯಾರನ್ನೂ ದ್ವೇಷಿಸದೆ ಇತರರಿಗೆ ಅನಿಷ್ಟವನ್ನು ಮಾಡದಿರುವುದು. ಆಶ್ರಮದ ನಿಯಮಗಳನ್ನು ನಿಷ್ಠಾಪೂರ್ವಕವಾಗಿ ಪಾಲಿಸುವುದು. ಅಧ್ಯಕ್ಷರನ್ನು ಗೌರವದಿಂದ ಕಾಣುತ್ತ ಕರ್ತವ್ಯಕರ್ಮಗಳನ್ನು ಶ್ರೀರಾಮಕೃಷ್ಣರ ಸೇವೆಯೆಂದು ಬಗೆದು ಮನಃಪೂರ್ವಕವಾಗಿ ಮಾಡುವುದೇ ಸುಖ-ಶಾಂತಿಗಳನ್ನು ಪಡೆಯುವ ಉಪಾಯ.

೫. ಗೃಹಸ್ಥಭಕ್ತರು ಮಾಡಬೇಕಾದ ನಾಲ್ಕು ವಿಷಯಗಳು :

೧. ಪ್ರತಿನಿತ್ಯ ಜಪಧ್ಯಾನ ೨) ಶಾಸ್ತ್ರ ಪಠಣ ('ವಚನವೇದ'ವನ್ನು ಓದುವುದು) ೩) ಸಂಸಾರದ ಎಲ್ಲಾ ಕೆಲಸಗಳನ್ನೂ ಭಗವದ್ಭಾವದಿಂದ ಮಾಡುವುದು. ೪. ಪರೋಪಕಾರ ಮಾಡುವುದು, ಯಾರಿಗೂ ಅನಿಷ್ಟವನ್ನು ಮಾಡದಿರುವುದು.

ಸನಾತನ ಧರ್ಮದ ಮೂರು ಸ್ತಂಭಗಳು-೧) ಸಾಧು-ಮಹಾತ್ಮರು ೨) ಹಬ್ಬ-ಹರಿದಿನಗಳು ೩) ತೀರ್ಥಸ್ಥಾನಗಳಲ್ಲಿ ಸ್ನಾನಾದಿ ಕರ್ಮಗಳು. ವಾಸ್ತವವಾಗಿ, ಹಿಂದೂ ಧರ್ಮವನ್ನು ಜೀವಂತವಾಗಿಯೂ, ಭದ್ರವಾಗಿಯೂ ಇಡುವುದಕ್ಕೆ ಇವೇ ಕಾರಣವೆಂದು ಹೇಳಬೇಕು.

ಧರ್ಮಜೀವನದ ಮೂಲ: ೧) ದೇಹವ್ಯತಿರಿಕ್ತವಾದ ಚೈತನ್ಯ ಸ್ವರೂಪದ 'ಆತ್ಮ'ದಲ್ಲಿ ವಿಶ್ವಾಸ ೨) ಸತ್ಕರ್ಮಗಳಿಂದ ಸುಖ ಪ್ರಾಪ್ತಿಯೂ, ದುಷ್ಕರ್ಮಗಳಿಂದ ದುಃಖವೂ ನಿಶ್ಚಿತವೆಂಬ ಅರಿವು ೩) ಕರ್ಮಫಲಗಳನ್ನು ನೀಡುವ ಭಗವಂತನಲ್ಲಿ ವಿಶ್ವಾಸ.

ನಾವು ಚಿಂತಿಸಬೇಕಾದ ವಿಷಯ: ಶ್ರೀರಾಮಕೃಷ್ಣರು ಸ್ಥಾಪಿಸಿರುವ ಧರ್ಮ ಎಂಥದ್ದು? ಅವರ ಧರ್ಮಪಥ ಹಾಗೂ ಅವು ಉಪದೇಶಿಸಿರುವ ಸಾಧನಾ ಪ್ರಣಾಲಿಯನ್ನು ಸ್ವಾಮಿ ವಿವೇಕಾನಂದರು ಮಠದ ನಿಯಮಾವಳಿಯಲ್ಲಿ ಬರೆದಿದ್ದಾರೆ. ಅವುಗಳನ್ನು ನಾವು ನೆನಪಿನಲ್ಲಿಟ್ಟುಕೊಂಡು ಆಚರಣೆಗೆ ತರಬೇಕು.

ಸಾಧನೆ-ಭಜನೆ ಹಾಗೂ ಶಾಸ್ತ್ರಗಳ ಅಧ್ಯಯನದ ಫಲವಾಗಿ ಅವರ ಪ್ರಜ್ಞಾದೃಷ್ಟಿಯು ತೆರೆದಿತ್ತು. ಅವರ ಸ್ವತಂತ್ರ ಚಿಂತನೆ ಹಾಗೂ ನೂತನ ದೃಷ್ಟಿಭಂಗಿಯು ನಮಗೆ ಹೊಸ ಬೆಳಕನ್ನು ತೋರಿದ್ದವು. ಒಂದು ದಿನ ಅವರು ಸೇವಕ ಅನೂಪರನ್ನು ಕರೆದು ಹೇಳಿದ್ದರು : ''ಹೀಗೆ ಬರೆ: ಸಮುದ್ರ ಮಂಥನದ ಸಮಯ ಕಾಲಕೂಟ ವಿಷವು ಮೇಲೆದ್ದು ಜಗತ್ತನ್ನೆ ನಾಶಮಾಡ ಹೊರಟಾಗ ಭಗವಾನ್ ಶಿವನು ಸ್ವತಃ ತಾನೇ ಅದನ್ನು ಕುಡಿದು, ದೇವತೆಗಳಿಗೆ ಅಮೃತವನ್ನು ಪಾನ ಮಾಡಿಸಿ ಅವರಿಗೆ ಅಮರತ್ವವನ್ನು ನೀಡಿದನು. ಆ ಹಾಲಾಹಲವು ಸದಾಶಿವನ ಕಂಠಪ್ರದೇಶದಲ್ಲಿ ನಿಂತದ್ದರಿಂದ ಅವನು 'ನೀಲಕಂಠ'ನೆಂದು ಪ್ರಖ್ಯಾತನಾದನು. ವರ್ತಮಾನ ಕಾಲದಲ್ಲಿ ಜಡವಿಜ್ಞಾನದ ವಿಶೇಷ ಪ್ರಗತಿಯಿಂದ ಮೇಲೆದ್ದಿರುವ ಹಾಲಾಹಲವು ಎಲ್ಲೆಡೆಯೂ ಹರಡಿ ಮಾನವ ಸಮಾಜವನ್ನು ನಾಶಗೊಳಿಸ ಹೊರಟಿರುವಾಗ ಭಗವಾನ್ ರಾಮಕೃಷ್ಣರು ನಾಸ್ತಿಕತೆಯ ವಿಷವನ್ನು ಜೀರ್ಣಿಸಿಕೊಳ್ಳಲು ಭಗವದ್ವಿಶ್ವಾಸ ಹಾಗೂ ಭಕ್ತಿರೂಪದ 'ಕಥಾಮೃತ'ವನ್ನು ನೀಡಿ, ಜಗದ್ರಕ್ಷಣೆಯನ್ನು ಮಾಡಿದ್ದಾರೆ. ಈ ಹಾಲಾಹಲವೇ ಅವರ ಕಂಠದಲ್ಲಿ ಕ್ಯಾನ್ಸರ್ ರೋಗವಾಗಿ ಪ್ರಕಟವಾಯಿತು. ''

ಪ್ರಚಾರವಿಮುಖ ಸಂನ್ಯಾಸಿಗಳು ತಮ್ಮ ಅನುಭೂತಿಗಳನ್ನು ಇತರರಿಗೆ ಹೇಳಬಯಸುವುದಿಲ್ಲ. ಶಾಸ್ತ್ರಗಳಲ್ಲಿ 'ಸ್ವಸಂವೇದ್ಯ' ಎಂದರೆ ಅನುಭೂತಿಯಾದವರಿಗೆ ತಿಳಿದಿದೆ; 'ಪರಸಂವೇದ್ಯ' ಎಂದರೆ ಶಾಸ್ತ್ರಗಳಲ್ಲಿ ಹೇಳಿರುವ ಮುಕ್ತಪುರುಷರ ಲಕ್ಷಣಗಳನ್ನು ತಿಳಿದುಕೊಂಡು ಅದರಂತೆ ವ್ಯಕ್ತಿಯ ಮೌಲ್ಯಮಾಪನವನ್ನು ಮಾಡುವುದು. ವೃಂದಾವನದಲ್ಲಿದ್ದಾಗ ಅನೂಪ ಈ ಘಟನೆಯನ್ನು ನನಗೆ ಹೇಳಿದ್ದರು. ಒಬ್ಬ ಅಮೆರಿಕನ್ ದಂಪತಿಗಳನ್ನು ಮಹಾರಾಜರು ತುಂಬ ಪ್ರೀತಿಸುತ್ತಿದ್ದರು. ಅವರಲ್ಲೊಬ್ಬರು ಕುತೂಹಲದಿಂದ ಮಹಾರಾಜರನ್ನು ಕೇಳಿದರು. ''ಸ್ವಾಮೀಜಿ, ನೀವು ಅನುಮತಿ ನೀಡಿದರೆ ಒಂದು ಪ್ರಶ್ನೆಯನ್ನು ಕೇಳಬೇಕೆಂದಿದ್ದೇನೆ. ದಯವಿಟ್ಟು ಉತ್ತರಿಸುವಿರಾ?'' ಮಹಾರಾಜರು ಸಮ್ಮತಿಸಿದಾಗ ಅವರು ಕೇಳಿದರು, ''ನಿಮಗೆ ಯಾವುದೇ ದರ್ಶನವಾಗಲಿ, ಆಧ್ಯಾತ್ಮಿಕ ಅನುಭೂತಿಯಾಗಲಿ ಆಗಿದೆಯೆ?'' ಮಹಾರಾಜ್ ಹೇಳಿದರು, ''ಜೀವನದಲ್ಲಿ ನಾನೆಂದೂ ಯಾವುದೇ ದರ್ಶನಕ್ಕಾಗಿ ಆಸೆಪಡಲಿಲ್ಲ, ಈಗಲೂ ಪಡುತ್ತಿಲ್ಲ. ಆದರೆ ಭಗವಂತನ ಕೃಪೆಯನ್ನು ಪಡೆದಿದ್ದೇನೆ ಎಂದು ಹೇಳಬಲ್ಲೆ.'' ನಂತರ ಭಾವೋದ್ವೇಗದಿಂದ ಹಾಸಿಗೆಯಲ್ಲಿ ಮಲಗಿ ಭಕ್ತರನ್ನು ಹೊರಗೆ ಕಳುಹಿಸಲು ಸೇವಕರಿಗೆ ಹೇಳಿದರು. ಸೇವಕರಿಗೆ ಅವರು, ''ತುಂಬಾ ಕಷ್ಟವಾಗುತ್ತಿದೆ, ನನ್ನ ಬೆನ್ನಿನ ಮೇಲೆ ಕೈಯಾಡಿಸು,'' ಎಂದರು. ''ಏನಾಯ್ತು?'' ''ವಾಯು ಊರ್ಧ್ವಗಾಮಿಯಾಗಿದೆ. ಈಗ ಏನೂ ಮಾತನಾಡಬೇಡ'' ಎನ್ನುತ್ತ ನಿಧಾನವಾಗಿ ಶಾಂತರಾಗಿ ನಿದ್ರಿಸಿದರು. ಶ್ರೀಮಾತೆಯವರ ಶಿಷ್ಯರಾದ ಇವರು ಧನ್ಯರು. ರಾಮಕೃಷ್ಣ ಸಂಘದ ಮಹಾನ್ ಸಂನ್ಯಾಸಿಗಳಾಗಿದ್ದ ಇವರು ಧನ್ಯರು!